ಮಾಡಿಕೊಡಬೇಕಾದವರು ಯಾರು? ಅವರು ನನ್ನ ಮಾತನ್ನು ಗಂಭೀರವಾಗಿ ಪರಿಗಣಿಸಬಹುದಾದ ಸಾಧ್ಯತೆ ಇದೆಯೇ? ಹೀಗೇ ಬಿಟ್ಟರೆ ಇದು ಇನ್ನ್ಯಾವ ಹಂತ ತಲುಪುವುದೋ? ನನ್ನ ತಲೆ ಕೂಡಾ ಕೆಟ್ಟು ಮೊಸರಾಗತೊಡಗಿತು.

★★★

ದಿನಗಳು ಕಳೆದುಹೋದುವೇ ವಿನಾ ಕಾಂತಿ ಮತ್ತೆ ಕೆಲಸಕ್ಕೆ ಬರಲಿಲ್ಲ. ಮನೋವಿಕಲ್ಪ ತೀವ್ರವಾಯಿತೇ? ಕೇಳಬೇಕು ಯಾರನ್ನು? ಅವರ ಬಿಡಾರ ಯಾವ ಕೊಳೆಗೇರಿಯಲ್ಲಿದೆಯೋ ಯಾರು ಬಲ್ಲ? ಆಗೀಗ ಮನದಲ್ಲಿ ಮಿಂಚಿ ಹೋಗುವ ಇಂತಾ ಯೋಚನೆಗಳ ನಡುವೆ ಹೊಸ ಕೆಲಸದಾಕೆಯ ತಲಾಶು ನಡೆದು ಒಬ್ಬಳನ್ನು ಆಯ್ಕೆ ಮಾಡಿಕೊಂಡಿದ್ದೂ ಆಯ್ತು. ಬಂದ ಮೊದಲ ದಿನವೇ ಚುರುಕ್ ಎನಿಸುವ ಸುದ್ದಿ ಕೊಟ್ಟಳು ಅವಳು.

"ಅವ್ವಾರೇ, ಕಾಂತಿ ನಿಮ್ಮನೆಗೆ ಕೆಲಸಕ್ಕೆ ಬರ್ತಿದ್ಲಲ್ಲ, ಸುದ್ದಿ ಗೊತ್ತಾಯ್ತಾ?"

"ಏನೇ ಅದು?"

"ಯಾರಿಗೂ ಹೇಳ್ದೆ ಮನೆಂದ ಓಡಿ ಹೋಗಿ ಮದುವೆ ಮಾಡ್ಕಂಡ್ಲಂತೆ ಅವ್ವಾರೇ. ಯಾರನ್ನ ಮದುವೆ ಆಗಿದ್ದು ಗೊತ್ತಾ?"

"ಯಾರನ್ನ?"

"ತಂಗಿ ಗಂಡನನ್ನೇ..."

"ಸತ್ಯ?"

"ನಾನೆಂತಕ್ಕೆ ಸುಳ್ಳು ಹೇಳ್ಲಿ? ಅವಳೇನು ನನ್ನ ವೈರೀನಾ?"

ಇದೆಂತಾ ಫಜೀತಿ ಮಾಡಿಕೊಂಡಳು ಕಾಂತಿ. ಕುಡುಕನನ್ನು ಮದುವೆಯಾಗಿ ತನ್ನ ಬಾಳನ್ನಲ್ಲದೆ ತಂಗಿಯ ಬದುಕನ್ನೂ ಹಾಳು ಮಾಡಿಟ್ಟಳು. 'ಮದುವೆ...', 'ಮದುವೆ...' ಎಂದು ಅವಳು ನನ್ನ ಹತ್ತಿರ ಗುಟ್ಟು ಬಿಚ್ಚಿಟ್ಟದ್ದು ಯಾಕೆ? ಯಾರಿಗೂ ಹೇಳಲಾಗದ ಸತ್ಯ ಎದೆ ಸುಡುತ್ತಿತ್ತೇ? ಅಥವಾ ನನ್ನ ಮೇಲೆ ಅವಳಿಗೆ ಅದೆಂತದೋ ವಿಶ್ವಾಸ ಬೆಳೆದುಬಿಟ್ಟಿತ್ತಾ? ಮದುವೆಯ ಬಗ್ಗೆ ಕಾಂತಿಗೆ ಇಷ್ಟೊಂದು ಹಪಾಹಪಿ ಇತ್ತೆಂದು ನನಗೆ ಗೊತ್ತೇ ಆಗಿರಲಿಲ್ಲ. ತಂಗಿಯ ಬದುಕನ್ನು ಕಣ್ಣಾರೆ ಕಂಡೂ ಇಂತದೊಂದು ವ್ಯಾಮೋಹಕ್ಕೆ ಕಾಂತಿ ಬಲಿ ಬಿದ್ದಿದ್ದು ಯಾಕೋ? ಹೇಗೋ? 'ಗಂಡಸರು ಇರುವುದೇ ಹಾಗೆ' ಎನ್ನುವುದು ಅವಳು ಕಂಡ ಪ್ರಪಂಚದಲ್ಲಿನ ಸಾರ್ವತ್ರಿಕ ಸತ್ಯವಾಗಿತ್ತಾ? ಎರಡನೆಯ ಮದುವೆಯನ್ನು ಸಹಜವೆಂಬಂತೆ ಸ್ವೀಕರಿಸಿಬಿಟ್ಟಳಾ ಕಾಂತಿ? ಮೊದಲೇ ಗೊತ್ತಿದ್ದಿದ್ದರೆ ಬುದ್ಧಿಮಾತು ಹೇಳಿ ನೋಡಬಹುದಿತ್ತೇನೋ...

ಮುಗ್ಧ ಹೆಣ್ಣಿನ ಕುರಿತು ಮನಸ್ಸು ಆರ್ದ್ರವಾಯ್ತು. ಕಣ್ಣಾಲಿಗಳು ತುಂಬಿಕೊಂಡುವು.

## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.